ಈ) ಜಿಲ್ಲೆಗಳ ಆಂದೋಲನ ಯೋಜನೆಗಳ ಅಂದಾಜಿನಂತೆ 5 ಜಿಲ್ಲೆಗಳಿಂದ ಸುಮಾರು 20,63,000 ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವ ಗುರಿ ಹಮ್ಮಿಕೊಳ್ಳಲಾಗಿದೆ.

ಉ) ರಾಷ್ಟ್ರೀಯ ಸಾಕ್ಷರತಾ ನಿಯೋಗದ ನಿಯಮದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಹಣವನ್ನು ಬಿಡುಗಡೆ ಮಾಡಲಾಗುವುದು. ಆದ್ದರಿಂದ ಒಂದು ಜಿಲ್ಲೆಗೆ ಹೆಚ್ಚು ಅಥವಾ ಕಡಿಮೆ ಎಂಬ ಪ್ರಶ್ನೆ ಬರುವುದಿಲ್ಲ.

ಊ) ಉದ್ಭವಿಸುವುದಿಲ್ಲ

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಉಪನಿರ್ದೇಶಕರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಸಹಾಯಕ ಕಮೀಷನರ್‌ಗಳ ಸಂಖ್ಯೆ

1578. ಶ್ರೀ ಎ.ಎಂ. ಹಿಂಡಸ್ಗೇರಿ (ಹುಬ್ಬಳ್ಳಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಸಹಾಯಕ ಕಮೀಷನರ್‌ಗಳ ಒಟ್ಟು ಸಂಖ್ಯೆ ?

ಆ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಪದವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಉಪ ನಿರ್ದೇಶಕರ ಹುದ್ದೆಗೆ ಇತರ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆಯೇ?

ಇ) ಕೆ.ಎ.ಎಸ್. ಅಧಿಕಾರಿಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಈ) ಹಾಗಿದ್ದಲ್ಲಿ ಯಾವಾಗ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) 25

ಆ) ಇಲ್ಲ

ಇ) ಹೌದು

ಈ) ಇಲಾಖೆಯ ಅರ್ಹ ಅಧಿಕಾರಿಗಳ ಪ್ರಕರಣಗಳನ್ನು ಸಿ ಆಂಡ್ ಆರ್ ನಿಯಮಗಳನುಸಾರ ಪರಿಶೀಲಿಸಿ, ಅವರುಗಳಿಗೆ ಪದೋನ್ನತಿ ನೀಡಿ ಆದೇಶಗಳನ್ನು ಹೊರಡಿಸುವ ಸಂದರ್ಭದಲ್ಲಿ.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ

1581. ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಅದರಲ್ಲಿ ಗದಗ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಶಿಕ್ಷಕರ ಹುದ್ದೆಗಳು ಬಹಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಹುಡುಗರ ಪಠ್ಯ ಸಂಖ್ಯೆಗಳ ಪ್ರಕಾರ ಇರಬೇಕಾದ ಹುದ್ದೆಗಳು ಎಷ್ಟು ಹಾಗೂ ಅವುಗಳನ್ನು ತುಂಬುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಮೇಲೆ ಕಾಣಿಸಿರುವ 2 ತಾಲ್ಲೂಕುಗಳಲ್ಲಿ ಶಿಕ್ಷಕರು ಕಡಿಮೆ ಇರುವುದರಿಂದ ಶಾಲೆಗಳನ್ನು ಮುಚ್ಚುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಬಂದಿದ್ದಲ್ಲಿ ತೀರ್ವ ಕ್ರಮ ಕೈಗೊಳ್ಳಲಾಗುವುದೇ;

ಈ) ಮುಂಡರಗಿ ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಬರುವ ಶಾಲೆ ಕೊಠಡಿ, ಸುಣ್ಣ ಎಷ್ಟು ಹಾಗೂ ಕೊಠಡಿಗಳು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಉದಾ : ಮುಂಡರಗಿ ಕೋಟೆ ಶಾಲೆಯಲ್ಲಿ ಪಠ್ಯ ಸಂಖ್ಯೆ ಹೆಚ್ಚಿದ್ದು ಹೆಚ್ಚಿನ ಕೊಠಡಿಗಳನ್ನು ಕೊಡುವ ವಿಚಾರ ಸರ್ಕಾರದ ಗಮನಕ್ಕೆ ಇದೆಯೇ; ಹಾಗಿದ್ದಲ್ಲಿ ಎಷ್ಟು ಕೊಡಲಾಗುವುದು);

ಉ) ಮುಂಡರಗಿಯಲ್ಲಿ ಮುನಿಸಿಪಾಲಿಟಿ ಸರಹದ್ದಿನಲ್ಲಿ ಉರ್ದು ಶಾಲೆಗಳ ಕೊಠಡಿಗಳು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಅದರ ಬಗ್ಗೆ ಯಾವಕ್ರಮ ಕೈಗೊಳ್ಳಲಾಗುವುದು ;

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 685 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಗದಗ್ ತಾಲ್ಲೂಕಿನಲ್ಲಿ 35 ಹುದ್ದೆಗಳು, ಮುಂಡರಗಿ ತಾಲ್ಲೂಕಿನಲ್ಲಿ 24 ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ)

	ಮುಂಡರಗಿ	ಗದಗ
ವಿದ್ಯಾರ್ಥಿ ಹಾಗೂ ಶಿಕ್ಷಕರ ಅನುಪಾತ 50:1ರ ಪ್ರಕಾರ ಇರಬೇಕಾದ ಹುದ್ದೆಗಳು	360	508
ಹಾಲಿ ಮಂಜೂರಾದ ಹುದ್ದೆಗಳು	312	446
ಹೆಚ್ಚಿಗೆ ಬೇಕಾದ ಶಿಕ್ಷಕರ ಹುದ್ದೆಗಳು	48	62

ಹೆಚ್ಚುವರಿ ಶಿಕ್ಷಕರ ಹುದ್ದೆಗಳ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಧಾರವಾಡ ಜಿಲ್ಲೆಗೆ 3ನೇ ಹಂತದ ಕಪ್ಪು ಹಲಗೆ ಕಾರ್ಯಾಚರಣೆ ಯೋಜನೆ ಅಡಿಯಲ್ಲಿ 47 ಹಾಗೂ 4ನೇ ಹಂತದಲ್ಲಿ 232 ಹುದ್ದೆಗಳು ಮಂಜೂರಾಗಿವೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಸಹ ಕ್ರಮಕ್ಕೆಗೊಳ್ಳಲಾಗುತ್ತಿದೆ.

ಇ) ತಾತ್ಕಾಲಿಕವಾಗಿ ನಿಯೋಜನೆ ಮೇರೆಗೆ ಶಿಕ್ಷಕರನ್ನು ಒದಗಿಸಿ ಶಾಲೆಗಳು ಮುಚ್ಚದಂತೆ ನೋಡಿಕೊಳ್ಳಲಾಗಿದೆ. ಖಾಲಿ ಹುದ್ದೆಗಳನ್ನು ತುಂಬಲು ತೀವ್ರಕ್ರಮ ಕೈಗೊಳ್ಳಲಾಗುವುದು.

ಈ) ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ 8 ಪ್ರಾಥಮಿಕ ಶಾಲೆಗಳು ಬರುತ್ತಿದ್ದು, ಅವುಗಳಲ್ಲಿ ಒಟ್ಟು 29 ಕೊಠಡಿಗಳಿವೆ. ಸದರಿ ವಿಷಯ ಸರ್ಕಾರದ ಗಮನಕ್ಕೆ ಬಂದಿದ್ದು ಸದ್ಯಕ್ಕೆ ನಗರ ಪ್ರದೇಶಕ್ಕೆ ಮಂಜೂರಾದ 12 ಕೊಠಡಿಗಳಲ್ಲಿ 8 ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ತಿಯಾಗಿವೆ. ಉಳಿದ 4 ಕೊಠಡಿಗಳು ಪ್ರಗತಿ ಹಂತದಲ್ಲಿವೆ.

ಕೋಟೆ ಶಾಲೆಯ ಮಕ್ಕಳ ಪಠ್ಯ ಸಂಖ್ಯೆ : 924 ಹಾಜರಾತಿ ಸಂಖ್ಯೆ : 681 ಇದೆ. ಸದರಿ ಶಾಲೆಯಲ್ಲಿ ಸದ್ಯಕ್ಕೆ 7 ಕೊಠಡಿಗಳಿದ್ದು ಇತರೆ 5 ಕೊಠಡಿಗಳ ಅವಶ್ಯಕತೆ ಇದೆ. ಸದ್ಯಕ್ಕೆ 2 ಕೊಠಡಿಗಳನ್ನು ಕಟ್ಟಿಸಲಾಗಿದೆ.

ಉ) ಸರ್ಕಾರದ ಗಮನಕ್ಕೆ ಬಂದಿದ್ದು, 9ನೇ ಹಣಕಾಸು ಯೋಜನೆಯಲ್ಲಿ 2 ಕೊಠಡಿಗಳನ್ನು ಈಗಾಗಲೇ ನಿರ್ಮಿಸಲಾಗಿದೆ.